ಪಾದವನ್ನು ನೆಲಕ್ಕೊತ್ತಿ ಇನ್ನೊಂದರಲ್ಲಿ ಆಕಾಶ ಮೆಟ್ಟಿದಂತೆ... ಹೀಗೆ ಒಂದು ಅನಾಮಿಕ ಹುಡುಗಿಯ ಗೆಳೆತನಕ್ಕೆ, ಅವಳ ಪ್ರೀತಿಗೆ ಹುಡುಗ ಎರವಾದ.

ಇಷ್ಟರಲ್ಲೇ ಹುಡುಗಿ ರೋಚಕಗೊಂಡಿದ್ದಳು. ಈ ಬಗೆಯ ಹುಡುಗನ ಗೆಳೆತನವನ್ನು ಹೃದಯಕ್ಕಿಟ್ಟ ಏಣಿ ಎಂದು ಬರೆದಳು. ನೀನೇ ನನ್ನ ಹೃದಯದರಸ ಎಂದಳು. ಹೀರೋ ಎಂದಳು. ಆಗೆಲ್ಲಾ ಹುಡುಗನೂ ತುಂಟತನದಿಂದ ಅದನ್ನು ಸ್ವೀಕರಿಸಿದ. ಆಕೆಗೆ ಸಂತೋಷವಾಗಲಿ ಎಂದು ಅವಳಂದದ್ದನ್ನೆಲ್ಲಾ ಮೆಚ್ಚಿಕೊಂಡ. ಹುಡುಗಿ ನಿನ್ನ ನೆನಪಲ್ಲೇ ದಿನದಿಂದ ದಿನಕ್ಕೆ ಹುಚ್ಚಿಯಾಗುತ್ತಿರುವೆ ಎಂದಾಗ ತಾನೂ ಪ್ರತಿ ರಾತ್ರಿ ಕನಸಲ್ಲಿ ನಿನ್ನನ್ನು ಕಾಣುತ್ತಿರುವೆ ಎಂದ. ಹುಡುಗ ಹುಡುಗಿಯನ್ನು ತುಂಟಿ ಎಂದು ಛೇಡಿಸಿದಾಗ ಹುಡುಗಿ ಅವನನ್ನು ತುಂಟ ಎಂದು, ಮುದ್ದು ಎಂದು, ಪೋಕರಿ ಎಂದು ಕೊಂಡಾಡಿದಳು.

ಕೊನೆಗೊಮ್ಮೆ ಹುಡುಗಿ ಅದೆಂಥ ಹುಚ್ಚು ನಿರ್ಧಾರವಾದ 'ಐ ಲವ್ ಯೂ' ಎಂದು ಬರೆದಳು. ಉತ್ತರಿಸುವ ಕೆಲಸ ಈಗ ಹುಡುಗನದ್ದಾಯಿತು. ಎಂದೂ ಕಾಣದ ಹುಡುಗಿಯನ್ನು ಪ್ರೀತಿಸುವುದಾದರೂ ಹೇಗೆ? ಇಲ್ಲಿಂದ ಹುಡುಗ ಸುಮ್ಮನೇ ಉಳಿಯಬಹುದಿತ್ತು. ಇದನ್ನು ಕೇವಲ ನಾನ್‌ಸೆನ್ಸ್ ಎಂದೋ ಪತ್ರರತಿ ಎಂದು ಝಾಡಿಸಿಬಿಡಬಹುದಿತ್ತು. ಅಥವಾ ನೆವರ್ ಲವ್ ಎ ಸ್ಟ್ರೇಂಜರ್ ಎಂಬ ಆಂಗ್ಲ ಮಾತನ್ನು ನೆನಪಿಸಿಕೊಂಡು ನಾವಿಬ್ಬರೂ ಪ್ರೀತಿಸುವುದಕ್ಕೆ ಅರ್ಥವೇ ಇಲ್ಲ ಎಂದು ಹುಡುಗಿಗೆ ಸೂಚಿಸಬಹುದಿತ್ತು.

ಏನು ಮಾಡಬೇಕೆಂದು ತೋಚದೆ ಹುಡುಗ ತನ್ನ ಅತ್ಯಂತ ಪ್ರೀತಿಯ ಕೆಲಸವಾದ ನೀಲಾಕಾಶವನ್ನು ನೋಡುತ್ತಾ ನಿಂತ. ಸಂಜೆಯ ಹೊತ್ತು ಸೂರ್ಯ ಕಂತುವವನಿದ್ದ, ನೀಲಿ ಆಕಾಶಕ್ಕೆ ಬ್ರಶ್‌ನಲ್ಲಿ ಬಳಿದ ಹಾಗೆ ಕೆಂಬಣ್ಣ ಹೊಂಬಣ್ಣ ಮೆತ್ತಿಕೊಂಡಿದ್ದವು. ಒಂದು ಅಗಲ ರೆಕ್ಕೆಯ ಪಾತರಗಿತ್ತಿ ಸೂರ್ಯ ಮುಳುಗಿದ ಸಂದೇಶವನ್ನು ಹೊತ್ತು ಚಂದ್ರನ ಕಡೆಗೆ ಹೋಗುತ್ತಿರುವಂತೆ ಹಾರುತ್ತಿತ್ತು. ಅದರ ರೆಕ್ಕೆಗಳ ಮೇಲೆ ಚುಕ್ಕಿಗಳು ಸಂದೇಶದ ವಾಕ್ಯಗಳನ್ನು ಅಚ್ಚೊತ್ತಿದ ಹಾಗೆ ಹುಡುಗನಿಗೆ ಕಂಡಿತು. ಅದನ್ನು ಓದಲೆತ್ನಿಸಿದ. ಹಿಂಬಾಲಿಸುತ್ತಾ ನಡೆದ.

ಹುಡುಗಿಯ ಸಂದೇಶಕ್ಕೆ ಹುಡುಗ ಮಿಡಿದ. ಆಕೆಯದ್ದು ಹೃದಯ ಕಾವ್ಯದ ಮೊದಲ ವಾಕ್ಯಗಳೆಂದು ಹೊಗಳಿದ. ತಮ್ಮಿಬ್ಬರ ಈ ಪ್ರೀತಿ ಶ್ರುತಿ ಮೀರಿದ ಹಾಡು ಎಂದು ವರ್ಣಿಸಿದ. ಇದು ಹುಡುಗಿಯನ್ನು ಸಖತ್ ಪ್ರೇರೇಪಿಸಿತು.

ಅತ್ತ ಹುಡುಗಿಗೆ ರಾತ್ರಿ ಹುಡುಗ ಕನಸಿನಲ್ಲಿ ಬಂದು ಕಚಗುಳಿ ಇಟ್ಟಂತೆ ಅನುಭವ. ಇತ್ತ ಹುಡುಗನಿಗೆ ಹುಡುಗಿ ರಾತ್ರಿ ದೇದಿಪ್ಯಮಾನವಾಗಿ ಪ್ರತ್ಯಕ್ಷಗೊಂಡಂತೆ ಭಾಸ.

ಇಲ್ಲಿಗೆ ಕಥೆಯ ಮೊದಲ ಭಾಗವನ್ನು ನಿಲ್ಲಿಸುವುದೊಳಿತು. ಓದುಗರಾದ ನೀವೂ ಸಾಕಷ್ಟು ಗೊಂದಲಗೊಂಡಿರಬಹುದು ಅಥವಾ ಆಯಾಸಗೊಂಡಿರಲೂಬಹುದು.

★★★

ಇಷ್ಟು ನಡೆದಿದ್ದು ಬರೀ ನಲವತ್ತು ದಿನಗಳೊಳಗೆ, ಈ ವೇಳೆಗೆ ಇಬ್ಬರಿಗೂ ಪರಸ್ಪರರ ಕುರಿತು ಸಾಕಷ್ಟು ವಿವರ, ಮಾಹಿತಿ ವಿನಿಮಯವಾಗಿತ್ತು. ಹುಡುಗಿ ಒಂದು ದೊಡ್ಡ ಉದ್ದಿಮೆಯ ಇಂಜಿನಿಯರ್‌ನ ಮಗಳು. ಆಕೆ ಹೇಳುತ್ತಿದ್ದ ಪ್ರಕಾರ ಆ ಇಂಜಿನಿಯರ್ ದಂಪತಿಗೆ ಆಕೆ ಒಬ್ಬಳೇ ಮಗಳು.

ಆದ್ದರಿಂದ ಸಾಕಷ್ಟು ಮುದ್ದಿನಿಂದ, ಸಖತ್ ಪ್ರೀತಿಯಿಂದ ಬೆಳೆದಿದ್ದಳು. ಡಾಕ್ಟರಳಾಗಬೇಕೆಂಬ ಆದಮ್ಯ ಆಕಾಂಕ್ಷೆ ಇದ್ದ ಹುಡುಗಿಗೆ ಸಂಪ್ರದಾಯಸ್ಥ ಅಪ್ಪ ಅಮ್ಮನನ್ನು ಬಿಟ್ಟು ದೂರದೂರಿಗೆ ಹೋಗಿ